"ಸರಿ ಪ್ರಾಮಿಸ್ ಮಾಡ್ತಿನಿ, ಕೈಮೇಲೆ ಕೈಯಿಟ್ಟು ಭಾಷೆ ಕೊಡ್ತೀನಿ, ಕೈ ಕೊಡು."

ರಾನಾಗೆ ಈ ರೀತಿ ನಿರ್ಬಂಧ ವಿಧಿಸಿದ್ದು ಸ್ವಲ್ಪ ಸಮಾಧಾನ ತಂದರೂ ಶಾಂತಿಯಿಂದ ಇರಲಾಗಲಿಲ್ಲ ಅವಳಿಗೆ. ಈ ಎಲ್ಲ ವಿಚಾರ ಮಾಗೆ ಗೊತ್ತಾದರೆ? ದೇವರೇ ಗತಿ!

ಇವತ್ತು ಭಾನುವಾರ. ಆರಾಮಾಗಿ ನಿದ್ದೆ ಮಾಡೋಣ ಅಂದ್ರೆ, ಈಗಲೇ ರಾನಾ ಮೊಂಟಿ ಮನೆಗೆ ಹೋಗಿದ್ದಾನೆ. ಎದ್ದು ಕೂತ ರಾಕಾ ಮಂಚಕ್ಕೆ ಒರಗಿದಳು. ನಿದ್ದೆಯೆಲ್ಲ ಹಾರಿ ಹೋಯ್ತು. ಅಮ್ಮನ ಮೇಲೆ ಕೋಪ ಬಂತು. ರಾನಾ ಮೇಲೆ ಕೂಡ. ಒಬ್ರು ಆರಾಮಾಗಿ ನಿದ್ದೆ ಮಾಡ್ತಾ ಇದ್ದಾರೆ, ಮತ್ತೊಬ್ಬ ಆರಾಮ್ ಬಾಗ್ ಹೋಗಿದ್ದಾನೆ, ಮರೀಚಿಕೆ ಹಿಡಿಯೋಕೆ.

ಹೀಗೆ ವಿಷಣ್ಣಳಾದ ರಾಕಾಗೆ ಪದೇಪದೇ ಡಾಲಿಯಾ ಹೇಳಿದ ಮಾತು ನೆನಪಾಯಿತು. ಹೋದ ವರ್ಷ ಡಾಲಿಯಾ ರಾಕಾ ಒಂದೇ ಕ್ಲಾಸಿನ ಒಂದೇ ಬೆಂಚಲ್ಲಿ ಕೂರ್ತಾ ಇದ್ರು. ಅವಳ ಬಾಬಾಗೆ ವರ್ಗವಾದ್ದರಿಂದ ಡಾಲಿಯಾ ಈಗ ಡೆಲ್ಲಿಯಲ್ಲಿದ್ದಾಳೆ. ರಾಕಾಗೆ ಮುರಿದು ಹೋದ ಕುಟುಂಬಗಳ ಬಗ್ಗೆ ಡಾಲಿಯಾನೆ ಮೊದಲು ಹೇಳಿದ್ದು. ಅವಳನ್ನು ಬಾಬಾನ ಹತ್ತಿರ ಬಿಟ್ಟು ಅವರಮ್ಮ ಬೇರೆ ಯಾರದೋ ಜೊತೆ ಹೊರಟುಹೋಗಿದ್ದಳು. ಅಂದಿನಿಂದ ಡಾಲಿಯಾಗೆ ಅಮ್ಮನಿಲ್ಲ. ಇಡೀ ಕ್ಲಾಸಲ್ಲಿ ಅವಳು ರಾಕಾ ಜೊತೆ ಮಾತ್ರ ಮನಬಿಚ್ಚಿ ಮಾತಾಡ್ತಿದ್ಲು. ರಾಕಾ ಇಲ್ಲದ ದಿನ ಅವಳು ಬಹಳ ಮೌನವಾಗಿ ವಿಷಾದದಿಂದ ಇರುತ್ತಿದ್ದಳು. ಹದಿನೈದು ವರ್ಷದ ರಾಕಾಗೆ ಗೊತ್ತಾಗಿತ್ತು, ಈ ವಿಷಯ ಹೊರಗೆ ಹೋಗಿ ಎಲ್ಲರಿಗೂ ಗೊತ್ತಾದರೆ ಅವರೆಲ್ಲ ಬಹಳ ಕುತೂಹಲ ತಾಳ್ತಾರೆ ಮತ್ತು ಕರುಣೆಯಿಂದ ನೋಡ್ತಾರೆ ಅಂತ.

ಬುದ್ಧಿ ಬಂದ ಕೂಡಲೇ ರಾಕಾಗೆ ಗೊತ್ತಾಗಿತ್ತು, ಬಾಬಾ ಬೇಜವಾಬ್ದಾರಿ ಮನುಷ್ಯ ಅಂತ. ಹಠಾತ್ತಾಗಿ ಎಲ್ಲೋ ಹೋಗಿಬಿಡುತ್ತಿದ್ದ. ತಿಂಗಳಾನುಗಟ್ಟಲೆ ಮನೆಗೆ ಬರ್ತಾನೇ ಇರಲಿಲ್ಲ. ಆ ದಿನಗಳಲ್ಲಿ ಬಹಳ ಅಸಹಾಯಕರಾಗಿ ನಿರ್ಗತಿಕರಂತೆ ಜೀವನ ಸಾಗಿಸಬೇಕಿತ್ತು ಅವರು. ಬಾಬಾ ಬ್ಯಾಂಕಲ್ಲಿ ಒಳ್ಳೇ ಹುದ್ದೆಯಲ್ಲಿದ್ದ. ಅದನ್ನು ತನ್ನ ಬೇಜವಾಬ್ದಾರಿತನದಿಂದಾಗಿ ಕಳೆದುಕೊಂಡ. ಕೆಲವು ದಿನಗಳಂತೂ ಎಲ್ಲೂ ಸಾಲ ಸಿಗದೆ ಸೋರೆಕಾಯಿ, ಕುಂಬಳಕಾಯಿ ಕಡ್ಡಿ ತಂದು ಉಳಿದಬಳಿದ ಹಿಟ್ಟಲ್ಲಿ ರೊಟ್ಟಿ ಮಾಡಿ ಅಗಿದು ತಿಂದು ಜೀವನ ಸಾಗಿಸಬೇಕಾಗಿತ್ತು. ಬೇರೆ ದಾರಿ ಕಾಣದೆ ಅಮ್ಮ ಕೆಲಸ ಹಿಡಿಬೇಕಾಯಿತು. ಆ ಆಫೀಸಲ್ಲಿ ಅಮ್ಮನ ಬಾಸು ಸೈಫುಲ್ ಅಂಕಲ್.

ಬಾಬಾನ ಜೊತೆ ಡಿವೋರ್ಸ್ ಕಾಗದ ಪತ್ರಗಳು ಮುಗಿದ ಮೇಲೆ ಒಂದು ದಿನ ಸೈಫುಲ್ ಅಂಕಲ್ ತನ್ನ ಗೆಳೆಯರೊಡನೆ ಈ ಮನೆಗೆ ಬಂದರು. ಚೆನ್ನಾಗಿ ಊಟ ತಿಂಡಿ ಆಯ್ತು. ಚೈನೀಸ್ ಹೋಟೆಲ್ಲಿನಿಂದ ತರಿಸಿದ ತಿಂಡಿತೀರ್ಥ. ಅಮ್ಮ ಇಬ್ಬರನ್ನೂ ಪಕ್ಕಕ್ಕೆ ಕರೆದು ಹೇಳಿದಳು, "ಇವತ್ತಿಂದ ಸೈಫುಲ್ ಅಂಕಲ್ ನಮ್ಮ ಜೊತೆನೇ ಇರ್ತಾರೆ".

ಹೇಳಬೇಕಾದ ಅಗತ್ಯವೇನೂ ಇರಲಿಲ್ಲ. ಮೊದಲೇ ಎಲ್ಲಾ ಗೊತ್ತಾಗಿತ್ತು ರಾಕಾಗೆ. ಸ್ಕೂಲಿನ ಹುಡುಗಿಯರ ಪಿಸಪಿಸ ಮಾತಿನಲ್ಲಿ, ಅವರ ಕಣ್ನೋಟದಲ್ಲಿ ಸ್ಪಷ್ಟವಾಗಿತ್ತು. ಅವಳ ಕ್ಲಾಸ್ ಮಾತ್ರ ಅಲ್ಲ, ದೊಡ್ಡ ಕ್ಲಾಸಿನ ಹುಡುಗಿಯರಿಗೂ ತಲುಪಿತ್ತು.

ಅಮ್ಮ ಪಕ್ಕದ ರೂಮಿನ ಪಾರ್ಟಿಗೆ ಹೋಗೋಕೆ ಮುಂಚೆ ಕೇಳಿದ್ದಳು, "ನಿಮಗೇನಾದರೂ ಕೇಳಬೇಕು ಅನಿಸಿದರೆ ಕೇಳಿ".

ರಾಕಾ ನೆಲ ನೋಡುತ್ತಾ ಏನೂ ಇಲ್ಲ ಎಂಬಂತೆ ತಲೆಯಲ್ಲಾಡಿಸಿದಳು. ರಾನಾ ಕೂಡ ದೀದಿ ಥರ ತಲೆಯಲ್ಲಾಡಿಸ್ತಾ ಇದ್ರೂ ಥಟಕ್ಕಂತ ಅವನ ಬಾಯಿಂದ ಪ್ರಶ್ನೆ ತೂರಿಬಂತು, "ಸೈಫುಲ್ ಅಂಕಲ್ ಇಲ್ಲಿದ್ರೆ ಬಾಬಾ ಎಲ್ಲಿಗೆ ಹೋಗ್ತಾನೆ?"

"ಅದು ನಮಗೆ ಬೇಕಾಗಿಲ್ಲ. ಅವನಿಗೆ ಎಲ್ಲಿ ಬೇಕೋ, ಎಲ್ಲಿ ಇಷ್ಟವಾಗುತ್ತೋ ಅಲ್ಲಿ ಇರ್ತಾನೆ."